

## ಆಕರ್ಷಕ ಗಣೇಶ

ಬಳ್ಳಾರಿ ಜಿಲ್ಲೆ ಕುರುವತ್ತಿಯ ಮಲ್ಲಿಕಾರ್ಜುನ ಸ್ವಾಮಿ ದೇವಾಲಯವನ್ನು 900 ವರ್ಷಗಳ ಹಿಂದೆ ಕಲ್ಯಾಣಿ ಚಾಲುಕ್ಯರ ಶೈಲಿಯಲ್ಲಿ ನಿರ್ಮಿಸಿರುವುದು ಇತಿಹಾಸ. ಈ ದೇಗುಲದಲ್ಲಿ ಮಲ್ಲಿಕಾರ್ಜುನ ಸ್ವಾಮಿಯು ಲಿಂಗದ ರೂಪದಲ್ಲಿ ನೆಲೆಸಿದ್ದಾನೆ. ದೇವಾಲಯವು ಏಕಕೂಟವಾಗಿದ್ದು, ಮಹಾ ಮಂಟಪದ ಜೊತೆಗೆ ಮೂರು ನವರಂಗಗಳೂ ಇವೆ. ನವರಂಗವು ಹೊರ ಮಂಟಪ, ರಂಗಮಂಟಪ, ಗರ್ಭಗೃಹ ಮತ್ತು ಮೂರು ದ್ವಾರಗಳನ್ನು ಸಂಪರ್ಕಿಸುತ್ತದೆ. ದೇಗುಲದ ಆವರಣದಲ್ಲಿರುವ ರಂಗಮಂಟಪದಲ್ಲಿ ಆಕರ್ಷಕ ಭವ್ಯವಾದ ಗಣೇಶ ಮೂರ್ತಿಯನ್ನು ಕಾಣಬಹುದು. ಮೂರ್ತಿಯ ಎತ್ತರ 5 ಅಡಿ. ಲಿಂಗದ ರೂಪದಲ್ಲಿರುವ ಮಲ್ಲಿಕಾರ್ಜುನ ಸ್ವಾಮಿಯ ಮೇಲೆ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿರುವುದು ಅತ್ಯಂತ ವಿಶೇಷ ಹಾಗೂ ಕುತೂಹಲಕಾರಿಯಾಗಿದೆ. ಗಣೇಶ ಚತುರ್ಥಿಯಂದು ಭಕ್ತರು ಗಣೇಶನಿಗೆ ವಿಜೃಂಭಣೆಯಿಂದ ಪೂಜೆಗೈಯುತ್ತಾರೆ.

–ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು



## ಇದು ಬರೀ ಶಿಲೆಯಲ್ಲ; ಕಲೆಯ ಬಲೆ!

ಚಿತ್ರದಲ್ಲಿರುವ ಈ ಕಲ್ಲನ್ನು ನೋಡಿ. ಇದು ಮಾಸ್ತಿಗಲ್ಲೂ ಅಲ್ಲ, ವೀರಗಲ್ಲೂ ಅಲ್ಲ. ಇಲ್ಲಿರುವ ಚಿತ್ತಾರ ನೋಡಿದರೆ ಇದು ಯಾರೋ ಶಿಲ್ಪಿ ಕೆತ್ತಿದಂತಿದೆ. ಆದರೆ ವಿಶೇಷವೆಂದರೆ ಇದು ನೈಸರ್ಗಿಕವಾಗಿಯೇ ರೂಪುಗೊಂಡ ಕಲ್ಲು.

ದೂರದಿಂದ ನೋಡಿದರೆ ಕರಿ ಅಣಬೆ ರೀತಿಯಲ್ಲಿ ಕಾಣುವ ಈ ಕಲ್ಲು ಸಿದ್ದಾಪುರ ತಾಲ್ಲೂಕು ಗೋಳಿಮಕ್ಕಿ ಬಳಿಯ ಹೆಗ್ಗಾರದಲ್ಲಿ ದಟ್ಟ ಕಾನನದ ನಡುವೆ ನಿರ್ಮಲವಾಗಿ ಹರಿಯುವ ಜುಳುಜುಳು ನಾದದ ಅಘನಾಶಿನಿ ನದಿಯ ದಂಡೆಯಲ್ಲಿ ಕಂಡುಬಂತು. ಈ ಕಲ್ಲಿನ ಮೇಲಿನ ಚಿತ್ತಾರ ಒಂದೇ ರೀತಿಯ ಸೀಕ್ವೆನ್ಸ್‌ನಿಂದ ಕೂಡಿದ್ದು ನೋಡಲು ಆಕರ್ಷಕವಾಗಿದೆ. ಇಂತಹ ಅನೇಕ ಕಲ್ಲುಗಳು ವಿವಿಧ ವಿನ್ಯಾಸ, ಆಕಾರಗಳಲ್ಲಿ ಇದೇ ನದಿಯ ದಂಡೆ ಮೇಲೆ ತನ್ನಿಂತಾನಾಗೇ ರೂಪುಗೊಂಡಿದೆ.

–ಭಾರ್ಗವಿ ಆರ್. ಹೆಗಡೆ, ಹೆಗ್ಗಾರ





## ಸೃಜನಶೀಲ ಪ್ರವೇಶದ್ವಾರ

ಬೆಳ್ತಂಗಡಿ ಮಂಗಳೂರು ಮುಖ್ಯ ರಸ್ತೆಯ ವಗ್ಗ ಆಲಂಪುರಿ ಬಳಿಯ ಸಾಲುಮರದ ತಿಮ್ಮಕ್ಕ ವೃಕ್ಷ ಉದ್ಯಾನವನದ ಪ್ರವೇಶದ್ವಾರವು ಸೃಜನಶೀಲತೆಯಿಂದ ಕೂಡಿದ್ದು, ನೋಡುಗರನ್ನು ತನ್ನತ್ತ ಆಕರ್ಷಿಸುತ್ತದೆ. ಕರ್ನಾಟಕ ಅರಣ್ಯ ಇಲಾಖೆಯು ಆನೆಯ ದಂತದ ಮಾದರಿಯಲ್ಲಿ ಪ್ರವೇಶದ್ವಾರವನ್ನು ನಿರ್ಮಿಸಿದೆ. ಜೊತೆಗೆ ಆನೆಯ ಚಿತ್ರವನ್ನು ಪ್ರವೇಶ ದ್ವಾರದ ಕೆಳ ಭಾಗದಲ್ಲಿ ಬರೆಯಲಾಗಿದೆ.

–ಅರುಣ್, ಕಿಲ್ಲೂರು